# ಈ ವರ್ಷ ಕೇವಲ 29 ದಿನ ಕಾಲ ನಡೆದ ಅಧಿವೇಶನ

## ವರ್ಷಕ್ಕೆ ಕನಿಷ್ಠ 60 ದಿನ ಕಲಾಪ ನಡೆಯಬೇಕೆಂಬ ನಿಯಮ | 10 ವರ್ಷದಿಂದ ಸರ್ಕಾರಗಳಿಂದ ಆಗದ ನಿಯಮ ಪಾಲನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಧಾನಮಂಡಲದ ಅಧಿವೇಶನ ವರ್ಷಕ್ಕೆ ಕನಿಷ್ಠ 60 ದಿನಗಳಾದರೂ ನಡೆಸಬೇಕು ಎಂಬ ನಿಯಮವನ್ನು 10 ವರ್ಷಗಳಿಂದ ಯಾವುದೇ ಸರ್ಕಾರ ಪಾಲನೆ ಮಾಡದೆ ಗಾಳಿಗೆ ತೂರಿದ್ದು, ಪ್ರಸಕ್ತ ವರ್ಷದಲ್ಲಿ ಕೇವಲ 29 ದಿನಗಳು ಮಾತ್ರ ಅಧಿವೇಶನ ನಡೆಸಲಾಗಿದೆ.

2024ನೇ ಸಾಲಿನಲ್ಲಿ ರಾಜ್ಯಪಾಲರು 2 ಸದನಗಳನ್ನುದ್ದೇಶಿಸಿ ಭಾಷಣ ಮಾಡುವ ಜಂಟಿ ಅಧಿವೇಶನದಿಂದ ಆರಂಭವಾಗುವ ವಿಧಾನ ಮಂಡಲ ಅಧಿವೇಶನವು ಬಜೆಟ್ ಅಧಿವೇಶನ, ಚಳಿಗಾಲ ಮತ್ತು ಮಳೆಗಾಲ ಅಧಿವೇಶನ ಸೇರಿ 29 ದಿನಗಳಿಗೆ ಸೀಮಿತವಾಗಿದೆ. 10 ದಿನಗಳ ಕಾಲ ಚಳಿಗಾಲ ಅಧಿವೇಶನ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ, ಕನ್ನಡ ಸಾಹಿತ್ಯ ಸಮ್ಮೇಳನ ಹಿನ್ನೆಲೆಯಲ್ಲಿ ಒಂದು ದಿನ ಮೊಟಕುಗೊಳಿಸಲಾಗಿತ್ತು. ಸದನ ನಡೆಯುವ ವೇಳೆ ಮಾಜಿ ಸಿಎಂ ಎಸ್.ಎಂ.ಕೃಷ್ಣ ನಿಧನದ ಹಿನ್ನೆಲೆಯಲ್ಲಿ 1 ದಿನ ರಜೆ ಘೋಷಣೆ ಕಾರಣ ಅಧಿವೇಶನ 8 ದಿನಗಳ ಕಾಲ ನಡೆಯಿತು.



**ಇತ್ತೀಚಿನ ಸರ್ಕಾರಗಳಿಗೆ ಬದ್ಧತೆ ಇಲ್ಲವಾಗಿದೆ. ಅಧಿವೇಶನ 60 ದಿನಗಳ ಕಾಲ ನಡೆಯುವುದರಿಂದ ಜನರ ಸಮಸ್ಯೆಗಳ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲಬಹುದು. ಇತ್ತೀಚಿನ ದಿನದಲ್ಲಿ ಜನರ ಸಮಸ್ಯೆಗಳಿಗಿಂತ ಹೆಚ್ಚಾಗಿ ರಾಜಕೀಯ ವಿಚಾರಗಳ ಬಗ್ಗೆ ಹೆಚ್ಚಿನ ಚರ್ಚೆ ನಡೆಯುತ್ತಿದೆ. ಕನಿಷ್ಠ 60 ದಿನ ಕಾಲ ಅಧಿವೇಶನ ನಡೆಸುವಂತೆ ಈಗಾಗಲೇ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೆ. ಮತ್ತೊಮ್ಮೆ ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಮುಂದಿನ ವರ್ಷಗಳಲ್ಲಾದರೂ 60 ದಿನಗಳ ಅಧಿವೇಶನ ನಡೆಸುವಂತೆ ಮನವಿ ಮಾಡಲಾಗುವುದು.**

• **ಬಸವರಾಜ ಹೊರಟ್ಟಿ** ಸಭಾಪತಿ

ವರ್ಷಕ್ಕೆ 60 ದಿನಗಳಿಗೂ ಹೆಚ್ಚು ದಿನ ಅಧಿವೇಶನ ನಡೆಸಬೇಕು ಎಂಬ ಒತ್ತಾಯಗಳು ಪದೇ ಪದೇ ಕೇಳಿಬಂದರೂ ಸರ್ಕಾರಗಳು ಮಾತ್ರ ಅದಕ್ಕೆ ಸೊಪ್ಪು ಹಾಕುತ್ತಿಲ್ಲ. 2015ರಲ್ಲಿ 58 ದಿನ ಕಾಲ ವಿಧಾನಮಂಡಲದ ಅಧಿವೇಶನ ನಡೆದ ಬಳಿಕ ಈವರೆಗೆ ಅಷ್ಟು ದಿನ ನಡೆದಿರುವ ಉದಾಹರಣೆಗಳೇ ಇಲ್ಲ. 2023ರಲ್ಲಿ ಚುನಾವಣೆ ನಡೆದ ವರ್ಷವಾಗಿದ್ದು ಬಿಜೆಪಿ ಸರ್ಕಾರ ಅವಧಿಯಲ್ಲಿ 11 ದಿನ ಮತ್ತು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 28 ದಿನಗಳ ಕಾಲ ಮಾತ್ರ ಉಭಯಮಂಡಲ ಅಧಿವೇಶನ ನಡೆದಿದೆ.

50ರಿಂದ 80ರ ದಶಕದವರೆಗೆ ನಡೆದ ಕಲಾಪಗಳು ಅತ್ಯುತ್ತಮವಾಗಿವೆ. ಸರ್ಕಾರವೇ ನಿಗದಿ ಮಾಡಿದ 60 ದಿನಗಳಿಗಿಂತಲೂ ಹೆಚ್ಚು ಕಾಲ ನಡೆದಿವೆ. 1961ರಲ್ಲಿ 92 ದಿನ, 1963ರಲ್ಲಿ 98 ದಿನ ಮತ್ತು 1973ರಲ್ಲಿ 97 ದಿನ ಅಧಿವೇಶನ ನಡೆಯುವ ಮೂಲಕ ಇತಿಹಾಸ ಬರೆಯಲಾಗಿದೆ. ಇನ್ನುಳಿದ ವರ್ಷಗಳಲ್ಲಿ 60ಕ್ಕೂ ಹೆಚ್ಚು ದಿನ ನಡೆದಿರುವ ಉದಾಹರಣೆಗಳಿವೆ.

# ‘ಸಿ.ಟಿ. ರವಿ ಅಸಾಂವಿಧಾನಿಕ ಪದ ಬಳಸಿದಕ್ಕೆ ಸಾಕ್ಷಿಗಳಿಲ್ಲ’

## ವಿಡಿಯೋ, ಆಡಿಯೋ ಲಭ್ಯವಾಗಿಲ್ಲ: ಹೊರಟ್ಟಿ

## ಸದನ ಹೇಗೆ ನಡೆಸಬೇಕೆಂದು ಗೊತ್ತಿದೆ: ಸಭಾಪತಿ



• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಸಿ.ಟಿ. ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಬಳಸಿದ್ದಾರೆನ್ನಲಾದ ಅಸಾಂವಿಧಾನಿಕ ಪದದ ಬಗ್ಗೆ ಯಾವುದೇ ದಾಖಲೆ, ವಿಡಿಯೋ, ಆಡಿಯೋ ಲಭ್ಯವಾಗಿಲ್ಲ ಎಂದು ವಿಪ ಸಭಾಪತಿ ಬಸವರಾಜ ಹೊರಟ್ಟಿ ಸ್ಪಷ್ಟಪಡಿಸಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ವಿರುದ್ಧ ಸದನದಲ್ಲಿ ಕಾಂಗ್ರೆಸ್ ಸದಸ್ಯರು ಗದ್ದಲ ಆರಂಭಿಸಿದ್ದರು. ಈ ವೇಳೆ ಬಿಜೆಪಿ ಸದಸ್ಯರೂ ಪ್ರತಿಭಟನೆಗಿಳಿದಿದ್ದರು. ಹಾಗಾಗಿ ಸದನ ಮುಂದೂಡಲಾಗಿತ್ತು. ಸದನದ ಮೈಕ್, ಆಡಿಯೋ ಹಾಗೂ ವಿಡಿಯೋ ಬಂದ್ ಮಾಡಲಾಗಿತ್ತು. ಗದ್ದಲ ಗೊಂದಲದ ನಡುವೆಯೇ ಹೆಬ್ಬಾಳ್ಕರ್ ನನ್ನ ಬಳಿ ಬಂದು, ನನಗೆ ಸಿ.ಟಿ. ರವಿ ಅವರು ಅಸಾಂವಿಧಾನಿಕ ಪದ ಬಳಸಿ ಬೈದಿದ್ದಾರೆ ಎಂದರು. ಬಳಿಕ ಉಮಾಶ್ರೀ, ನಾಗರಾಜ್, ಯತೀಂದ್ರ ಬಂದು ಬೈದಿದ್ದು ತಾವು ಕೇಳಿದ್ದಾಗಿ ತಿಳಿಸಿದರು. ಮತ್ತೊಂದೆಡೆ ರವಿ ಬೈದಿಲ್ಲ ಎಂದು ಬಿಜೆಪಿ ನಾಯಕರು ಹೇಳಿದರು ಎಂದರು. ಈ ಕುರಿತು ರವಿ ಅವರನ್ನು ಕರೆದು ವಿಚಾರಿಸಿದ ವೇಳೆ ಅವರು ನಾನು ಅಶ್ಲೀಲ ಪದ ಬಳಸಿಲ್ಲ, ‘ಫ್ರಸ್ಟ್ರೇಟ್’ ಎಂದಿದ್ದಾಗಿ ಹೇಳಿದರು. ನಾನು ಸ್ಪಷ್ಟ ರೂಲಿಂಗ್ ಕೊಟ್ಟಿದ್ದೇನೆ. ಸದನ ಹೇಗೆ ನಡೆಸಬೇಕೆಂದು ನನಗೆ ಗೊತ್ತಿದೆ ಎಂದು ಹೊರಟ್ಟಿ ಹೇಳಿದರು.

# ರವಿ ಅಶ್ಲೀಲ ಪದ ಬಳಕೆ ಬಗ್ಗೆ ಮತ್ತೆ ಪರಿಶೀಲನೆ: ಹೊರಟ್ಟಿ

## ಎಥಿಕ್ಸ್ ಕಮಿಟಿಯಿಂದ ವರದಿ ಬಂದ್ಮೇಲೆ ಕ್ರಮ

• **ಕನ್ನಡಪ್ರಭ ವಾರ್ತೆ** ಮದ್ದೂರು

ವಿಧಾನ ಪರಿಷತ್ತಿನಲ್ಲಿ ಸಿ.ಟಿ. ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬಗ್ಗೆ ಅಶ್ಲೀಲ ಪದ ಬಳಕೆ ಮಾಡಿದ್ದಾರೆನ್ನಲಾದ ಪ್ರಕರಣದ ಬಗ್ಗೆ ಖಾಸಗಿ ಚಾನಲ್‌ನಲ್ಲಿ ದಾಖಲೆ ಇದೆ ಎಂದು ಹೇಳಿಕೆ ಬಂದಿದ್ದು ಈ ಬಗ್ಗೆ ಮತ್ತೊಮ್ಮೆ ಪರಿಶೀಲನೆ ನಡೆಸಲಾಗುವುದು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ.



ಸದನ ಮುಂದೂಡುತ್ತಿದ್ದಂತೆಯೇ ನಮ್ಮ ಚಾನಲ್‌ಗಳು ಒಂದು ಸೆಕೆಂಡನಲ್ಲಿ ಬಂದ್ ಆಗುತ್ತವೆ. ನಾನು ಮತ್ತು ನಮ್ಮ ಕಾರ್ಯದರ್ಶಿ, ಹೆಚ್ಚುವರಿ ಕಾರ್ಯದರ್ಶಿ ಮತ್ತು ಉಪ ಕಾರ್ಯದರ್ಶಿ ಸೇರಿ ಪರಿಶೀಲನೆ ನಡೆಸಿದ್ದೇವೆ. ಅಶ್ಲೀಲ ಪದ ಬಳಕೆ ಆಗಿರುವುದು ನಮ್ಮ ಚಾನಲ್‌ಗಳಲ್ಲಿ ದಾಖಲಾಗಿಲ್ಲ ಎಂದರು. ಬೇರೆ ಚಾನಲ್‌ಗಳನ್ನು ನಾವು ನೋಡಿಲ್ಲ. ಈಗ ಖಾಸಗಿ ಚಾನಲ್‌ನಲ್ಲಿ ದಾಖಲೆ ಇದೆ ಎಂದು ಹೇಳಿದ್ದಾರೆ. ದಾಖಲೆ ಕೊಟ್ಟರೆ ನಮ್ಮದೆ ನಿಯಮಗಳನ್ನು ಅನುಸರಿಸಿ ಪರಿಶೀಲಿಸಲಾಗುವುದು ಎಂದರು. ಈ ಪ್ರಕರಣವನ್ನು ಎಥಿಕ್ಸ್ ಕಮಿಟಿಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದು. ಸಮಿತಿ ವರದಿ ನೀಡುತ್ತದೆ. ಅದನ್ನು ಪರಿಶೀಲಿಸಿ ಕ್ರಮ ಎಂದರು.

**ವಾದ - 2** ಕಲಾಪ ವೇಳೆ ಮಾತಾಡಿದ್ದರೆ ಮಾತ್ರ ಸಭಾಪತಿ ವ್ಯಾಪ್ತಿಗೆ

# ಕಲಾಪ ಮುಂದೂಡಿಕೆ ಬಳಿಕದ ಹೇಳಿಕೆ ಸಭಾಪತಿ ವ್ಯಾಪ್ತಿಗೆ ಇಲ್ಲ

## ಹೀಗಾಗಿ ಸಭಾಪತಿಗೆ ತಿಳಿಸಿ ಪೊಲೀಸರಿಂದ ಸಿ.ಟಿ.ರವಿ ಬಂಧನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ವಿಧಾನ ಪರಿಷತ್ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರು ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಅಶ್ಲೀಲ ಪದ ಬಳಸಿ ನಿಂದಿಸಿರುವ ಆರೋಪ ಬಂದಿದೆ. ಹೀಗಾಗಿ ಪ್ರಕರಣ ಸಭಾಪತಿಗಳಿಗೆ ವ್ಯಾಪ್ತಿಗೆ ಬರುವುದಿಲ್ಲ ಎಂಬ ವಾದವೂ ಕೇಳಿ ಬಂದಿದೆ.

ಕಲಾಪ ನಡೆಯುತ್ತಿರುವಾಗ ಸದಸ್ಯರು ಯಾವ ರೀತಿ ಮಾತನಾಡಬೇಕು? ಯಾರು ಮಾತನಾಡಬೇಕು? ನಿಯಮ ಉಲ್ಲಂಘಿಸಿ ಮಾತನಾಡಿದರೆ ಸೂಕ್ತ ಕ್ರಮ ಕೈಗೊಳ್ಳುವ ಅಧಿಕಾರ ಸಭಾಪತಿಗಳಿಗೆ ಇರುತ್ತದೆ.

ಆದರೆ, ಗುರುವಾರ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ಸಿ.ಟಿ. ರವಿ ನಿಂದನೆ ಮಾಡಿರುವುದಾಗಿ ಲಕ್ಷ್ಮೀ ಹೆಬ್ಬಾಳ್ಕರ್ ದೂರು ನೀಡಿದ್ದಾರೆ. ಹೀಗಾಗಿ ಪೊಲೀಸರು ವಿಧಾನಸೌಧಕ್ಕೆ ಬಂದು ಸಭಾಪತಿಗಳಿಗೆ ಮಾಹಿತಿ ನೀಡಿ ನೇರವಾಗಿ ಸಿ.ಟಿ. ರವಿ ಅವರನ್ನು ಬಂಧಿಸಿದ್ದಾರೆ.

ಒಂದೊಮ್ಮೆ ಕಲಾಪ ನಡೆಯುತ್ತಿರುವಾಗ ಇಂತಹ ಹೇಳಿಕೆ ನೀಡಿದ್ದರೆ ಸಭಾಪತಿಗಳು ಸದಸ್ಯರ ದೂರು ಆಧರಿಸಿ ಹಕ್ಕು ಬಾಧ್ಯತಾ ಸಮಿತಿ ಅಥವಾ ನೈತಿಕ ಸಮಿತಿಗೆ ಶಿಫಾರಸು ಮಾಡುತ್ತಿದ್ದರು ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

**ವಾದ - 3** ರವಿ ಪ್ರಕರಣ ಸಭಾಪತಿ ವ್ಯಾಪ್ತಿಗೆ ಬರಲ್ಲ ಎನ್ನಲಾಗದು

# ಸಭಾಪತಿ ರೂಲಿಂಗ್ ಇದೆ, ಈ ಕೇಸ್ ಅವರ ವ್ಯಾಪ್ತಿಗೇ ಬರುತ್ತೆ

## ಕಲಾಪ ಮುಂದೂಡಿಕೆ ಬಳಿಕವೂ ಸಭಾಪತಿಗಳಿಂದ ವಿಚಾರಣೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ವಿಧಾನ ಪರಿಷತ್ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ್ದರೂ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರು ಸದನದ ಆವರಣದಲ್ಲೇ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಅಶ್ಲೀಲ ಪದ ಬಳಸಿ ನಿಂದಿಸಿರುವ ಬಗ್ಗೆ ದೂರು ದಾಖಲಾಗಿದೆ. ಈ ಬಗ್ಗೆ ಸಭಾಪತಿಗಳು ಇಬ್ಬರನ್ನೂ ವಿಚಾರಣೆ ನಡೆಸಿ ರೂಲಿಂಗ್ ಕೂಡ ನೀಡಿದ್ದಾರೆ. ಹೀಗಾಗಿ ಇದು ಸಭಾಪತಿಗಳ ವ್ಯಾಪ್ತಿಗೇ ಬರುತ್ತದೆ ಎಂದು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ವಿಧಾನಪರಿಷತ್ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ಘಟನೆ ನಡೆದಿರುವುದರಿಂದ ಸಭಾಪತಿಗಳ ವ್ಯಾಪ್ತಿಗೆ ಬರುವುದಿಲ್ಲ. ಹೀಗಾಗಿ ಪೊಲೀಸರು ಸುವರ್ಣಸೌಧಕ್ಕೆ ಬಂದು ಬಂಧಿಸಿದ್ದಾರೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದರು. ಆದರೆ, ಸಿ.ಟಿ.ರವಿ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ಇಬ್ಬರೂ ಸಭಾಪತಿಗಳಿಗೆ ದೂರು-ಪ್ರತಿ ದೂರು ದಾಖಲಿಸಿದ್ದಾರೆ.

ಲಕ್ಷ್ಮೀ ಹೆಬ್ಬಾಳ್ಕರ್ ನೀಡಿರುವ ದೂರಿಗೆ ವಿಧಾನ ಪರಿಷತ್ ಸದಸ್ಯರಾದ ನಾಗರಾಜ್ ಯಾದವ್, ಉಮಾಶ್ರೀ, ಡಾ। ಯತೀಂದ್ರ ಸಿದ್ದರಾಮಯ್ಯ, ಬಲ್ಕಿಸ್ ಬಾನು ಸಾಕ್ಷಿಯಾಗಿದ್ದಾರೆ. ದೂರು ಪಡೆದ ತಕ್ಷಣ ಸಭಾಪತಿಗಳು ಕಲಾಪದ ಆಡಿಯೋ, ವಿಡಿಯೋ ಪರಿಶೀಲನೆ ನಡೆಸಿದರು.

➘ 12

**ಸಮಾಪ್ತಿ** | 8 ದಿನ ಕಾಲ ಸುವರ್ಣಸೌಧದಲ್ಲಿ ನಡೆದ ಅಧಿವೇಶನ | ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತು 13.11 ಗಂಟೆ ಚರ್ಚೆ | ರವಿ–ಹೆಬ್ಬಾಳ್ಕರ್ ವಿವಾದ ಕಪ್ಪು ಚುಕ್ಕೆ

# ಗದ್ದಲ ನಡುವೆ ಬೆಳಗಾವಿ ಚಳಿಗಾಲ ಅಧಿವೇಶನ ಮುಕ್ತಾಯ

• **ಕನ್ನಡಪ್ರಭ ವಾರ್ತೆ** ಸುವರ್ಣ ವಿಧಾನಸೌಧ

ಕಳೆದ ಎಂಟು ದಿನಗಳ ಕಾಲ ಕುಂದಾನಗರಿಯಲ್ಲಿ ನಡೆದ ಚಳಿಗಾಲದ ಅಧಿವೇಶನ ಉಭಯ ಸದನಗಳಲ್ಲಿ ವಕ್ಫ್, ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ನಡೆದ ಲಾಠಿ ಪ್ರಹಾರ, ಬಾಣಂತಿಯರ ಸಾವಿನ ವಿಚಾರ, ಡಾ. ಅಂಬೇಡ್ಕರ್ ಕುರಿತು ಕೇಂದ್ರ ಸಚಿವ ಅಮಿತ್ ಶಾ ಆಡಿದ ಮಾತು ಸೇರಿ ಹಲವು ವಿಷಯಗಳ ಬಗ್ಗೆ ಸಾಕಷ್ಟು ಗದ್ದಲ, ವಾಕ್ಸಮರ, ಸವಾಲು–ಪ್ರತಿಸವಾಲು, ಚರ್ಚೆಯೊಂದಿಗೆ ಕೊನೆಗೊಂಡಿತು.

ಆದರೆ ಅಧಿವೇಶನದ ಕೊನೆಯ ದಿನವಾದ ಗುರುವಾರ ಹಿರಿಯರ ಮನೆಯಲ್ಲಿ ಬಿಜೆಪಿಯ ಸಿ.ಟಿ.ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕುರಿತು ಆಡಿದ್ದಾರೆನ್ನಲಾದ ಆಕ್ಷೇಪಾರ್ಹ ಪದ ಹಲವು ಘಟನೆಗಳಿಗೆ ಕಾರಣವಾಗಿದ್ದು, ಒಂದು ರೀತಿಯಲ್ಲಿ ಕಪ್ಪುಚುಕ್ಕೆಯಾಗಿ ಪರಿಣಮಿಸಿತು.

**ಒಗ್ಗಟ್ಟಿನ ಹೋರಾಟ ವಿಫಲ:** ಸರ್ಕಾರದ ವೈಫಲ್ಯಗಳನ್ನು ಅಸ್ತ್ರಗಳನ್ನಾಗಿ ಬಳಸಿಕೊಂಡು ಆಡಳಿತರೂಢ ಕಾಂಗ್ರೆಸ್ ಅನ್ನು ಇಕ್ಕಟ್ಟಿಗೆ ಸಿಲುಕಿಸಲು ಒಗ್ಗಟ್ಟಿನ ಹೋರಾಟ ತೋರುವಲ್ಲಿ ಪ್ರತಿಪಕ್ಷ ಬಿಜೆಪಿ–ಜೆಡಿಎಸ್ ವಿಫಲವಾಯಿತು. ಸದನದೊಳಗೆ ಹೋರಾಟ ನಡೆಸುವಲ್ಲಿ ಮಿತ್ರ ಪಕ್ಷದಲ್ಲಿ ಸಮನ್ವಯ ಕೊರತೆ ಇರುವುದು ಸಾಬೀತಾಯಿತು.



ಬಾಣಂತಿಯರ ಸಾವಿನ ಪ್ರಕರಣದಲ್ಲೂ ಸರ್ಕಾರವನ್ನು ಕಟ್ಟಿಹಾಕುವ ಪ್ರಯತ್ನವನ್ನು ನಿರೀಕ್ಷಿತ ಮಟ್ಟದಲ್ಲಿ ಮಾಡಲಿಲ್ಲ, ವಕ್ಫ್ ವಿವಾದಕ್ಕೆ ಸಂಬಂಧಿಸಿ ದಂತೆಯೂ ಪ್ರತಿಪಕ್ಷಗಳ ಆರೋಪಗಳಿಗೆ ಸರ್ಕಾರ ಸಮರ್ಥವಾಗಿ ಉತ್ತರ ನೀಡುವ ಮೂಲಕ ತಿರುಗೇಟು ನೀಡಿತು.

ಸಭಾತ್ಯಾಗ, ಸದನ ಮುಂದೂಡಿಕೆ, ಆರೋಪ–ಪ್ರತ್ಯಾರೋಪಗಳು, ಕೋಲಾಹಲ ನಡುವೆ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ವಿಧೇಯಕ, ರಾಜ್ಯ ಮೋಟಾರು ವಾಹನ ತೆರಿಗೆ ನಿರ್ಧಾರ ತಿದ್ದುಪಡಿ ವಿಧೇಯಕ ಸೇರಿ 16 ವಿಧೇಯಕಗಳು ಅಂಗೀಕಾರಗೊಂಡವು.

**8 ದಿನ, 64 ಗಂಟೆ ಕಲಾಪ:** ಮಂಡ್ಯ ಸಾಹಿತ್ಯ ಸಮ್ಮೇಳನ ಹಿನ್ನೆಲೆಯಲ್ಲಿ 10 ದಿನಗಳ ಬದಲು ಒಂಬತ್ತು ದಿನ ಮಾತ್ರ ಕಲಾಪ ನಡೆಸಲು ನಿರ್ಧರಿಸಲಾಯಿತು. ಈ ನಡುವೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನಿಧನ ಹಿನ್ನೆಲೆಯಲ್ಲಿ ಒಂದು ದಿನ ರಜೆ ಘೋಷಿಸಿದ್ದರಿಂದ ಕೇವಲ 8 ದಿನ ಮಾತ್ರ ಕಲಾಪ ನಡೆಯಿತು.

ರಾಜ್ಯದಲ್ಲಿ ತೀವ್ರ ವಿವಾದಕ್ಕೆ ಎಡೆಮಾಡಿ ಕೊಟ್ಟಿದ್ದ ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ, ವಕ್ಫ್ ವಿವಾದ, ಬಾಣಂತಿಯರ ಮತ್ತು ಶಿಶುಗಳ ಸಾವಿನ ವಿಚಾರ, ಉತ್ತರ ಕರ್ನಾಟಕ ಅಭಿವೃದ್ಧಿ ಮತ್ತು ಸಮಸ್ಯೆಗಳ ಕುರಿತು ವಿಧಾನಮಂಡಲದಲ್ಲಿ ವಿಸ್ತೃತ ಚರ್ಚೆ • ನಡೆಯಿತು. ಪಕ್ಷಾತೀತವಾಗಿ 49 ಸದಸ್ಯರು ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತು 13 ಗಂಟೆ 11 ನಿಮಿಷ ಕಾಲ ಚರ್ಚಿಸಿದರು.

**3004 ಪ್ರಶ್ನೆ ಸ್ವೀಕಾರ:** ಒಟ್ಟು 3004 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 150 ಪ್ರಶ್ನೆಗಳ ಪೈಕಿ 137 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ 2,237 ಪ್ರಶ್ನೆಗಳ ಪೈಕಿ 1,794 ಪ್ರಶ್ನೆಗಳಿಗೆ ಉತ್ತರ ನೀಡಲಾಗಿದೆ. ಗಮನ ಸೆಳೆಯುವ 44 ಸೂಚನೆಗಳ ಪೈಕಿ 294 ಸೂಚನೆಗಳಿಗೆ ಉತ್ತರ ಸ್ವೀಕರಿಸಲಾಗಿದೆ. ನಿಯಮ 351 ಅಡಿ 160 ಸೂಚನೆ ಅಂಗೀಕರಿಸಿದ್ದು, 80 ಸೂಚನೆಗಳ ಉತ್ತರ ಸ್ವೀಕರಿಸಲಾಗಿದೆ.

**ಹಲವು ವಿಶೇಷ:** ಸುವರ್ಣ ವಿಧಾನಸೌಧದ ಮೊದಲ ಮಹಡಿಯಲ್ಲಿ ಅನುಭವ ಮಂಟಪದ ತೈಲಚಿತ್ರ ಅನಾವರಣ, ಸಭಾಧ್ಯಕ್ಷರ ಪೀಠವನ್ನು ಹೊಸದಾಗಿ ರೋಸ್‌ವುಡ್‌ನಿಂದ ನಿರ್ಮಿಸಿ ಅಳವಡಿಸಿರುವುದು, ದೇಶದ ಪ್ರಥಮ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದ್, ಪ್ರಥಮ ಪ್ರಧಾನಿ ನೆಹರು, ಪ್ರಥಮ ಮಹಿಳಾ ಪ್ರಧಾನಿ ಇಂದಿರಾ ಗಾಂಧಿ ಸೇರಿ ವಿವಿಧ ಮಹನೀಯರ ವರ್ಣ ಚಿತ್ರಗಳನ್ನು ವಿಧಾನಸಭೆ ಸಭಾಂಗಣದಲ್ಲಿ ಅನಾವರಣಗೊಳಿಸಲಾಯಿತು. ಜೊತೆಗೆ ಸುವರ್ಣ ವಿಧಾನಸೌಧದಲ್ಲಿ ಪ್ರಥಮ ಬಾರಿಗೆ ತಡರಾತ್ರಿವರೆಗೆ ಅಧಿವೇಶನ ನಡೆಸಿ ದಾಖಲೆ ನಿರ್ಮಿಸಲಾಗಿದೆ.

**ವಿಧಾನಪರಿಷತ್:** ವಿಧಾನಸಭೆಯಲ್ಲಿ ಅಂಗೀಕೃತ ಎಲ್ಲ ವಿಧೇಯಕಗಳಿಗೆ ವಿಧಾನಪರಿಷತ್ ಅಂಗೀಕಾರ ನೀಡಿತು. ಉತ್ತರ ಕರ್ನಾಟಕ, ವಕ್ಫ್ ಆಸ್ತಿ ವಿವಾದ, ಬಾಣಂತಿಯರ ಸಾವಿನ ಘಟನೆಗಳು ಸಾಕಷ್ಟು ಬಿಸಿ ಬಿಸಿ ಚರ್ಚೆಗೆ ಕಾರಣವಾದವು.